ಶ್ರೀ ರೇವಣಸಿದ್ದೇಶ್ವರ ಕುರುಬ ಸಮಾಜದ ನಮ್ಮ ಸೋದರ ಸಮಜದವರು, ಕುಸ್ತಿ ಪಂದ್ಯಾವಳಿಗೆ ಸಾಕಷ್ಟು ಬೆಂಬಲ ಮತ್ತು ಸಹಕಾರ ನೀಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಾಗಿದೆ. ಎಲ್ಲರೂ ಸೇರಿ ಗ್ರಾಮೀಣ ಕಲೆಯನ್ನು ಉಳಿಸಿ ಬೆಳೆಸಬೇಕಾಗಿದೆ
● **ಸೀತಾರಾಮ** ಮಾಜಿ ಸದಸ್ಯ, ತಾಪಂ, ತರೀಕೆರೆ

ಕನ್ನಡಪ್ರಭ
ಶನಿವಾರ 8.10.2022

ಸಣ್ ಸುದ್ದಿ

ನವೆಂಬರ್‌ನಲ್ಲಿ ಜಾನಪದ ಸಮ್ಮೇಳನಕ್ಕೆ ತೀರ್ಮಾನ

ತರೀಕೆರೆ: ತಾಲೂಕು ಜಾನಪದ ಪರಿಷತ್ತು ವತಿಯಿಂದ ಜಾನಪದ ಸಮ್ಮೇಳನ ನಡೆಸುವ ಬಗ್ಗೆ ಪ್ರವಾಸಿ ಮಂದಿರದಲ್ಲಿ ಜಾನಪದ ಪರಿಷತ್ತು ಅಧ್ಯಕ್ಷ ಆರ್.ನಾಗೇಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ನವೆಂಬರ್‌ನಲ್ಲಿ ಜಾನಪದ ಪರಿಷತ್ತಿನ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು. ಸಮ್ಮೇಳನಕ್ಕೆ ಸಮ್ಮೇಳನಾಧ್ಯಕ್ಷತೆ ಸ್ಥಾನಕ್ಕೆ ಕೆಲವರ ಹೆಸರು ಮುಂಚೂಣಿಯಲ್ಲಿದ್ದು, ಮುಂದಿನ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಯಿತು. ಸಮ್ಮೇಳನಕ್ಕೆ ಪೂರ್ವಸಿದ್ಧತೆ ಹೇಗಿರಬೇಕು, ಅತಿಥಿಗಳನ್ನು ಆಹ್ವಾನಿಸುವ ಬಗ್ಗೆ, ಊಟೋಪಚಾರಗಳ ಬಗ್ಗೆ ಚರ್ಚಿಸಲಾಯಿತು. ಅತಿ ತುರ್ತಾಗಿ ಇನ್ನೊಂದು ಸಭೆಯನ್ನು ಕರೆಯಲು ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು. ಕ.ಜಾ.ಪ. ಗೌರವಾಧ್ಯಕ್ಷ ದೇವರಾಜ್, ಮಾರ್ಗದರ್ಶಕ ನಾಗೇನಹಳ್ಳಿ ತಿಮ್ಮಯ್ಯ, ರಾಜಶೇಖರಯ್ಯ, ಬಸವರಾಜಯ್ಯ, ಲೋಕೇಶ್, ಗಿರೀಶ್, ಸಹ ಕಾರ್ಯದರ್ಶಿ ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಮಿಲಾದ್ ಕಾರ್ಯಕ್ರಮ

ಕೊಪ್ಪ: ಪಟ್ಟಣದ ನೇತಾಜಿ ನಗರದ ಅಲ್ ಬದ್ರಿಯಾ ಜುಮ್ಮಾ ಮಸೀದಿ ಆವರಣದಲ್ಲಿ 1497ನೇ ಮಹಮ್ಮದ್ ಪೈಗಂಬರ್ ಜನ್ಮದಿನಾಚರಣೆ ಅಂಗವಾಗಿ ಶನಿವಾರ ಮತ್ತು ಭಾನುವಾರ ಮಿಲಾದ್ ಉನ್ ನಬಿ ಕಾರ್ಯಕ್ರಮ ಅಲ್ ಬದ್ರಿಯಾ ಜುಮ್ಮಾ ಮಸೀದಿಯ ಖತೀಬರಾದ ಸಿದ್ದೀಕಿ ಧಾರಿಮಿ ನೇತೃತ್ವದಲ್ಲಿ ನಡೆಯಲಿದೆ. ಶನಿವಾರ ಸಂಜೆ 7 ಗಂಟೆಗೆ ಸ್ವಲಾತ್ ವಾರ್ಷಿಕೋತ್ಸವ, ಸ್ವಾದಿಕ್ ಅಝ್ಹರಿ ಮತಪ್ರಭಾಷಣ, ಭಾನುವಾರ ಸುಬುಹಿ ನಮಾಜಿನ ನಂತರ ಮೌಲೂದ್ ಪಾರಾಯಣ, ಬೆಳಗ್ಗೆ 10 ಗಂಟೆಗೆ ಹಾಗೂ ಸಂಜೆ 6-30 ಗಂಟೆಗೆ ಮದರಸದ ವಿದ್ಯಾರ್ಥಿಗಳಿಂದ 'ಈಷ್ಕ್ ಎ ಮದೀನ' ಕಾರ್ಯಕ್ರಮ. ಮಸೀದಿಯ ಅಧ್ಯಕ್ಷ ಹಸನ್ ತವಕ್ಕಲ್ ಅಧ್ಯಕ್ಷತೆಯಲ್ಲಿ ವೇದಿಕೆ ಕಾರ್ಯಕ್ರಮವಿದೆ.

ತರೀಕೆರೆ ತಾಲೂಕು ಜಾನಪದ ಪರಿಷತ್ತು ವತಿಯಿಂದ ಸಮ್ಮೇಳನ ನಡೆಸುವ ಬಗ್ಗೆ ಪ್ರವಾಸಿ ಮಂದಿರದಲ್ಲಿ ಜಾನಪದ ಪರಿಷತ್ತು ಅಧ್ಯಕ್ಷ ಆರ್.ನಾಗೇಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ನವೆಂಬರ್‌ನಲ್ಲಿ ಜಾನಪದ ಪರಿಷತ್ತಿನ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು.

ಚಿಕ್ಕಮಗಳೂರಿನ ಸುಮುಖ ನಗರದಲ್ಲಿ ಮದ್ಯದಂಗಡಿ ತೆರೆಯಲು ಅಬಕಾರಿ ಇಲಾಖೆ ನೀಡಿರುವ ಪರವಾನಗಿ ರದ್ದುಪಡಿಸುವಂತೆ ಬಡಾವಣೆ ನಿವಾಸಿಗಳು ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

ಭದ್ರಾವತಿ ನಗರಸಭೆ ವಾರ್ಡ್ ನಂ.14ರ ಹೊಸಮನೆ ಕುರುಬರ ಬೀದಿಯ ಶ್ರೀ ಕೆರೆಕೋಡಮ್ಮ ದೇವಸ್ಥಾನ ಸಮಿತಿ ವತಿಯಿಂದ ನೂತನ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಸಮಿತಿ ಅಧ್ಯಕ್ಷ ಕೇಶವ ಗುದ್ದಲಿ ಪೂಜೆ ನೆರವೇರಿಸಿದರು. ಗೌರವಾಧ್ಯಕ್ಷ ನಾಗರಾಜ್ ದೊಡ್ಮನೆ, ಕಾರ್ಯದರ್ಶಿ ಸಂತೋಷ್, ಖಜಾಂಚಿ ಶಿವಕುಮಾರ್, ಮಂಜಪ್ಪ, ಮಲ್ಲಿಕಾರ್ಜುನ ಉಪಸ್ಥಿತರಿದ್ದರು.

ಕಾಫಿನಾಡು ಪ್ರವೇಶಿಸಿದ ಕಿತ್ತೂರು ಉತ್ಸವ ಜ್ಯೋತಿ

8 ಜಿಲ್ಲೆಗಳಲ್ಲಿ ಪ್ರವಾಸ ಮುಗಿಸಿ ಡಿಸಿ ಕಚೇರಿಗೆ ಆಗಮನ | ವೀರಗಾಸೆ ಕುಣಿತದೊಂದಿಗೆ ಸ್ವಾಗತ-ಪುಷ್ಪಾರ್ಚನೆ-ಬೀಳ್ಕೊಡುಗೆ

● **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಜಿಲ್ಲಾ ಕೇಂದ್ರಕ್ಕೆ ಶುಕ್ರವಾರ ಆಗಮಿಸಿದ ಕಿತ್ತೂರು ಉತ್ಸವದ ಜ್ಯೋತಿಯನ್ನು ಜಿಲ್ಲಾಡಳಿತ ವತಿಯಿಂದ ಆತ್ಮೀಯವಾಗಿ ಬರಮಾಡಿಕೊಂಡು ಪೂಜೆ ಸಲ್ಲಿಸಿ ಬಳಿಕ ಬೀಳ್ಕೊಡಲಾಯಿತು.

ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಕಿತ್ತೂರು ಉತ್ಸವದ ಜ್ಯೋತಿಯನ್ನು ವೀರಗಾಸೆ ಕುಣಿತದೊಂದಿಗೆ ಬರಮಾಡಿಕೊಳ್ಳಲಾಯಿತು. ಹೂವಿನಹಾರಹಾಕಿ ಪುಷ್ಪಾರ್ಚನೆ ನೆರವೇರಿಸಿ ನಂತರ ಬೀಳ್ಕೊಡಲಾಯಿತು.

ಬೆಳಗಾವಿ ಜಿಲ್ಲೆಯ ಕಿತ್ತೂರು ಚೆನ್ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿ ವೀರಮರಣ ಹೊಂದಿದ್ದು, ಅದರ ನೆನಪಿಗಾಗಿ ಕಿತ್ತೂರು ಉತ್ಸವನ್ನು ಅಲ್ಲಿನ ಜಿಲ್ಲಾಡಳಿತ ಹಮ್ಮಿಕೊಂಡು ಬರುತ್ತಿದೆ. ತಾಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಸುತ್ತಾಡುತ್ತಿದ್ದ ಜ್ಯೋತಿಯನ್ನು ಈ ವರ್ಷ ರಾಜ್ಯಾದ್ಯಂತ ಸಂಚರಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಕಿತ್ತೂರು ಉತ್ಸವದ ಜ್ಯೋತಿಯನ್ನು ಜಿಲ್ಲಾಡಳಿತದಿಂದ ಸ್ವಾಗತಿಸಲಾಯಿತು. ಶಾಸಕ ಟಿ.ಡಿ.ರಾಜೇಗೌಡ, ಜಿಲ್ಲಾಧಿಕಾರಿ ಕೆ.ಎನ್. ರಮೇಶ್, ನಗರಭಾಧ್ಯಕ್ಷ ವರಸಿದ್ದಿ ವೇಣುಗೋಪಾಲ್ ಇದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜ್ಯೋತಿಗೆ ಆ.2ರಂದು ಚಾಲನೆ ನೀಡಿದ್ದು, 8 ಜಿಲ್ಲೆಗಳನ್ನು ಸಂಚರಿಸಿದ ಜ್ಯೋತಿಯು ಶುಕ್ರವಾರ ಕಾಫಿನಾಡಿಗೆ ಆಗಮಿಸಿತು. ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಜ್ಯೋತಿಗೆ ಶಾಸಕ ಟಿ.ಡಿ.ರಾಜೇಗೌಡ, ನಗರಸಭೆ ಅಧ್ಯಕ್ಷ ವರಸಿದ್ದಿ ವೇಣುಗೋಪಾಲ್, ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ನೆರವೇರಿಸಿದರು.

ಜಿಲ್ಲಾಧಿಕಾರಿ ಅವರು ಜ್ಯೋತಿ ಯಾತ್ರೆಗೆ ಹಸಿರು ನಿಶಾನೆ ತೋರುವ ಮೂಲಕ ಮುಂದಿನ ಜಿಲ್ಲೆಗೆ ತೆರಳಲು ಅನುವು ಮಾಡಿಕೊಟ್ಟರು. ಸ್ವಾತಂತ್ರ್ಯದ ಬೆಳ್ಳಿಚುಕ್ಕಿ ನಾಡೆಂದು ಪ್ರಸಿದ್ಧಿ ಪಡೆದಿರುವ ಕಿತ್ತೂರಿನ ಉತ್ಸವಕ್ಕೆ ಅಲ್ಲಿ ನೆರೆದಿದ್ದ ಅಧಿಕಾರಿಗಳು ಮತ್ತು ನೌಕರರು ಜೈಕಾರ ಹಾಕಿದರು. ರಾಜ್ಯಾದ್ಯಂತ ಸಂಚರಿಸುವ ಕಿತ್ತೂರು ಉತ್ಸವದ ಜ್ಯೋತಿ ಆ.23ಕ್ಕೆ ಬೆಳಗಾವಿ ಜಿಲ್ಲೆಗೆ ತೆರಳಿದೆ. ಉತ್ಸವ ಆ.23ರಿಂದ 25ರವರೆಗೆ ನಡೆಯಲಿದೆ. ಬಯಲು ಹೊಂಗಲದ ಮುಖ್ಯಾಧಿಕಾರಿ ಉತ್ಸವ ಜ್ಯೋತಿಯೊಂದಿಗೆ ಆಗಮಿಸಿದ್ದರು.

ಈ ಸಂದರ್ಭದಲ್ಲಿ ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ, ಕಿತ್ತೂರು ರಾಣಿ ಚೆನ್ನಮ್ಮ ಅವರ ಕಾಯಕ ಮತ್ತು ಹೋರಾಟವನ್ನು ಯುವ ಪೀಳಿಗೆಗೆ ತಿಳಿಸಿಕೊಡುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಕಿತ್ತೂರು ಜ್ಯೋತಿ ಸಹಕಾರಿಯಾಗಲಿದೆ ಎಂದು ಹೇಳಿದರು.

ಚಿಕ್ಕಮಗಳೂರು ಉಪವಿಭಾಗಾಧಿಕಾರಿ ರಾಜೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ರಮೇಶ್ ಇದ್ದರು.

ಕಡೂರಲ್ಲಿ ನವದುರ್ಗೆಯರ ಅದ್ದೂರಿ ಮೆರವಣಿಗೆ, ಜಲಸ್ತಂಭನ

ಶ್ರೀ ಕೆಂಚಾಂಬ ದೇಗುಲ ಪಕ್ಕ 9 ದಿನಗಳ ಕಾಲ ಪ್ರತಿಷ್ಠಾಪಿಸಿದ್ದ ಶ್ರೀದೇವಿ ಮೂರ್ತಿಗಳ ಅದ್ದೂರಿ ರಾಜಬೀದಿ ಉತ್ಸವ

● **ಕನ್ನಡಪ್ರಭ ವಾರ್ತೆ** ಕಡೂರು

ಪಟ್ಟಣದ ಛತ್ರದ ಬೀದಿಯಲ್ಲಿರುವ ಶ್ರೀ ಕೆಂಚಾಂಬ ದೇವಾಲಯದ ಪಕ್ಕದಲ್ಲಿ 9 ದಿನಗಳ ಕಾಲ ಪ್ರತಿಷ್ಠಾಪಿಸಲಾಗಿದ್ದ ಶ್ರೀ ದುರ್ಗಾಂಬಾದೇವಿ ಸೇರಿದಂತೆ ನವದುರ್ಗಾ ಮಾತೆಯರ ಮೂರ್ತಿ ವಿಸರ್ಜನಾ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು.

ನವದುರ್ಗಿಯವರ ಅವತಾರಗಳ 9 ಮೂರ್ತಿಗಳನ್ನು ವಿಶೇಷವಾಗಿ ಅಲಂಕರಿಸಿ ಪ್ರತಿಷ್ಠಾಪಿಸಲಾಗಿತ್ತು. ಸಾವಿರಾರು ಭಕ್ತರು ಪ್ರತಿದಿನ ಆಸ್ಥಾನ ಮಂಟಪದಲ್ಲಿ ನಡೆವ ಪೂಜಾ ಕಾರ್ಯಗಳಲ್ಲಿ ಭಾಗವಹಿಸಿ, ಪೂಜೆ ಸಲ್ಲಿಸಿ ದೇವಿ ಕೃಪೆಗೆ ಪಾತ್ರರಾದರು. 9 ಅವತಾರದ ಶ್ರೀ ಅಮ್ಮನವರ ಮೂರ್ತಿಗಳನ್ನು 9 ರಥದಲ್ಲಿ ಕುಳ್ಳಿರಿಸಿ ಸಾವಿರಾರು ಭಕ್ತರೊಂದಿಗೆ ಅದ್ದೂರಿ ಮೆರವಣಿಗೆ ನಡೆಸಲಾಯಿತು.

ಪಟ್ಟಣದ ಛತ್ರದ ಬೀದಿಯಿಂದ ಶಿವಮೊಗ್ಗ-ಬೆಂಗಳೂರು ಮಾರ್ಗದಲ್ಲಿರುವ ಕಡೂರು ಪಟ್ಟಣದ ಕೆ.ಎಲ್.ವಿ. ವೃತ್ತ, ಮರವಂಜಿ ವೃತ್ತ ಸೇರಿದಂತೆ ವಿವಿಧ ರಾಜಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ಆ ಮೂಲಕ ಮೂರ್ತಿ ವಿಸರ್ಜನಾ ಸ್ಥಳವಾದ ಕಡೂರು ಕೆ.ಹೊಸಳ್ಳಿಯವರೆಗೂ ಬಾಣ ಬಿರುಸುಗಳು, ಮದ್ದುಗುಂಡುಗಳ ಸಿಡಿಸಿ, ಭಕ್ತರ ಜಯ ಘೋಷದೊಂದಿಗೆ ಮೆರವಣಿಗೆ ಸಾಗಿತು.

ಶ್ರೀದುರ್ಗಾದೇವಿ ಅವರನ್ನು ಸಾಂಪ್ರದಾಯಿಕವಾಗಿ ಕೆ.ಹೊಸಳ್ಳಿಯ ಕಲ್ಯಾಣಿಯಲ್ಲಿ ವಿಸರ್ಜಿಸಲಾಯಿತು.

ರಾತ್ರಿಯಾದರೂ ನೂರಾರು ಸಂಖ್ಯೆಯಲ್ಲಿ ಕೆ. ಹೊಸಳ್ಳಿಯ ಕಲ್ಯಾಣಿ ಬಳಿ ಭಕ್ತರು ಆಗಮಿಸಿ, ಆಚರಣೆಗೆ ಸಾಕ್ಷಿಯಾದರು. ಶಾಸ್ತ್ರಬದ್ಧ ಮತ್ತು ವಿಧಿವಿಧಾನಗಳ ಮೂಲಕ 9 ನವದುರ್ಗೆಯರ ಪ್ರತಿಮೆಗಳನ್ನು ಪೊಲೀಸ್ ಬಿಗಿ ಬಂದೋ ಬಸ್ತ್ ನಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ವಿಸರ್ಜಿಸಲಾಯಿತು.

ಇದೇ ಸಂದರ್ಭದಲ್ಲಿ ಶ್ರೀ ದುರ್ಗಾ ಸೇವಾ ಸಮಿತಿ ಪದಾಧಿಕಾರಿಗಳಾದ ಕಿರಣ್‌ಕುಮಾರ್, ಮಂಜುನಾಥ್, ಆಡಕೆ ಚಂದ್ರು, ಕೆ.ಎಚ್.ಎ. ಪ್ರಸನ್ನ, ಹುಲಿಕೆರೆ ಮಹೇಶ್, ಸುಬ್ರಹ್ಮಣ್ಯ ಕೆ.ವಿ., ಶಾಮಿಯಾನ ಚಂದ್ರು, ಮಲ್ಲಿಕಾರ್ಜುನ್ (ಮಲ್ಲು), ಶಿವಶಂಕರ್, ನವೀನ್, ಮಧು, ಪ್ರದೀಪ್, ಕಡೂರು ಎ. ಮಣಿ, ಅನಿಲ್‌ಕುಮಾರ್, ನಮೋಶಿ, ಮಹೇಂದ್ರ ಜೈನ್, ನಲ್ಲೂರಿ ಸುರೇಶ್ ಸೇರಿದಂತೆ ನೂರಾರು ಭಕ್ತರು ಪಾಲ್ಗೊಂಡಿದ್ದರು.

8ರಂದು ಗಾಂಧಿ ಸ್ಮೃತಿ, ವ್ಯಸನ ಮುಕ್ತರ ಸಮಾವೇಶ

ನರಸಿಂಹರಾಜಪುರ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಚಿಕ್ಕಮಗಳೂರು ಜಿಲ್ಲಾ ಜನಜಾಗೃತಿ ವೇದಿಕೆ ಆಶ್ರಯದಲ್ಲಿ ಗಾಂಧಿ ಸ್ಮೃತಿ ಮತ್ತು ವ್ಯಸನಮುಕ್ತರ ಸಮಾವೇಶ ಅ.8ರಂದು ಅಗ್ರಹಾರದ ಉಮಾ ಮಹೇಶ್ವರ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಕಟಣೆ ತಿಳಿಸಿದೆ. ಬೆಳಗ್ಗೆ 9 ಗಂಟೆಯಿಂದ ಕೋಟೆ ಮಾರಿಕಾಂಬ ದೇವ ಮಂದಿರದಿಂದ ಅಗ್ರಹಾರದವರೆಗೆ ಜಾಥಾ ನಡೆಯಲಿದೆ. ಶಾಸಕ ಟಿ.ಡಿ.ರಾಜೇಗೌಡ ಉದ್ಘಾಟಿಸಲಿದ್ದಾರೆ. ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಅರವಿಂದ ಸೋಮಯಾಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಡಿ.ಎನ್.ಜೀವರಾಜ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಶ್ರೀ ಗುರು ರೇವಣಸಿದ್ದೇಶ್ವರ ಕುಸ್ತಿ ಸಂಘಕ್ಕೆ ಬೆಳ್ಳಿ ಕತ್ತಿ ಹಸ್ತಾಂತರ

● **ಕನ್ನಡಪ್ರಭ ವಾರ್ತೆ** ತರೀಕೆರೆ

ಶ್ರೀ ಗುರುರೇವಣಸಿದ್ದೇಶ್ವರ ಗರಡಿ ಕುಸ್ತಿ ಸಂಘದಿಂದ ಕುಸ್ತಿ ನಡೆಯುತ್ತಿದೆ. ಇಂಥ ಕಾರ್ಯಕ್ರಮಗಳಲ್ಲಿ ನಿಮ್ಮ ಜೊತೆಗೆ ತಾಲೂಕು ಒಕ್ಕಲಿಗರ ಸಂಘವು ಇರುತ್ತದೆ. ಇದಕ್ಕೆ ಪೂರಕವಾಗಿ ಶ್ರೀ ಕೆಂಪೇಗೌಡರ ನೆನಪಿನ ಬೆಳ್ಳಿ ಕತ್ತಿಯನ್ನು ಶ್ರೀ ಗುರು ರೇವಣಸಿದ್ದೇಶ್ವರ ಗರಡಿ ಕುಸ್ತಿ ಸಂಘಕ್ಕೆ ಹಸ್ತಾಂತರಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ, ನಿಮ್ಮೊಟ್ಟಿಗೆ ನಾವು ಇರುತ್ತೇವೆ ಎಂದು ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಸೀತಾರಾಮ ಹೇಳಿದರು.

ತಾಲೂಕು ಒಕ್ಕಲಿಗರ ಸಂಘ ವತಿಯಿಂದ ಶುಕ್ರವಾರ ಸಂಘ ಆವರಣದಲ್ಲಿ ಶ್ರೀ ಗುರು ರೇವಣಸಿದ್ದೇಶ್ವರ ಗರಡಿ ಕುಸ್ತಿ ಸಂಘಕ್ಕೆ ಶ್ರೀ ಕೆಂಪೇಗೌಡರ ನೆನಪಿನ ಬೆಳ್ಳಿ ಕತ್ತಿ ಹಸ್ತಾಂತರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀ ರೇವಣಸಿದ್ದೇಶ್ವರ ಕುರುಬ ಸಮಾಜದ ನಮ್ಮ ಸೋದರ ಸಮಜದವರು, ಕುಸ್ತಿ ಪಂದ್ಯಾವಳಿಗೆ ಸಾಕಷ್ಟು ಬೆಂಬಲ ಮತ್ತು ಸಹಕಾರ ನೀಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಾಗಿದೆ. ಎಲ್ಲರೂ ಸೇರಿ ಗ್ರಾಮೀಣ ಕಲೆಯನ್ನು ಉಳಿಸಿ ಬೆಳೆಸಬೇಕಾಗಿದೆ ಎಂದು ಹೇಳಿದರು.

ತರೀಕೆರೆ ತಾಲೂಕು ಒಕ್ಕಲಿಗ ಸಂಘದ ಅಧ್ಯಕ್ಷ ಟಿ.ಎಂ,ಉಮಾಶಂಕರ್ ಮಾತನಾಡಿದರು. ಶ್ರೀ ಗುರು ರೇವಣಸಿದ್ದೇಶ್ವರ ಗರಡಿ ಕುಸ್ತಿ ಸಂಘದ ಅಧ್ಯಕ್ಷ ವಗ್ಗಪ್ಪರ ಮಂಜುನಾಥ್, ತರೀಕೆರೆ ತಾಲೂಕು ಒಕ್ಕಲಿಗರ ಸಂಘದ ಕಾರ್ಯದರ್ಶಿ ಸುಂದರೇಶ್, ಗೌರವಾಧ್ಯಕ್ಷ ನಿಂಗೇಗೌಡ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಸೀತಾರಾಮ, ಕೆ.ವಿ.ನಾಗೇಶ್, ಶಂಕರ, ವಿ.ಜವರೇಗೌಡ, ಶ್ರೀನಿವಾಸ, ಚಿದಾನಂದ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೊಪ್ಪ: ಮಿಲಾದ್ ಉನ್ ನಬಿ ಕಾರ್ಯಕ್ರಮಕ್ಕೆ ಚಾಲನೆ

ಕೊಪ್ಪ: ಪಟ್ಟಣದ ಕೆಳಗಿನ ಪೇಟೆಯ ನೂರುಲ್ ಇಸ್ಲಾಂ ಅಸೋಸಿಯೇಷನ್, ಮುಹಿಯುದ್ದೀನ್ ಜುಮ್ಮಾ ಮಸ್ಜಿದ್, ನೂರುಲ್ ಇಸ್ಲಾಂ ಶಾಫಿ ಮದ್ರಸ ವತಿಯಿಂದ ಮಸೀದಿ ಆವರಣದಲ್ಲಿ ಶುಕ್ರವಾರ ಸ್ವಲಾತ್ ವಾರ್ಷಿಕೋತ್ಸವದ ಮೂಲಕ 1497ನೇ ಮಿಲಾದ್ ಉನ್ ನಬಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಶುಕ್ರವಾರ ಸಂಜೆ ಮುಹಿಯುದ್ದೀನ್ ಜುಮ್ಮಾ ಮಸೀದಿಯ ಅಧ್ಯಕ್ಷ ಕೆ.ಎಂ.ಝೈನುದ್ದೀನ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುತ್ತಿನ ಕೊಪ್ಪದ ಕೌಕಬುಲ್ ಹುದಾ ಎಜುಕೇಷನಲ್ ಸೆಂಟರ್ ಮುಖ್ಯಸ್ಥ ಅಸಯ್ಯಿದ್ ಹುಸೈನುಲ್ ಜಮಲುಲೈಲಿ ತಂಜಳ್ ನೇತೃತ್ವದಲ್ಲಿ ಸ್ವಲಾತ್ ವಾರ್ಷಿಕೋತ್ಸವ ನಡೆಯಿತು. ಮುಹಿಯುದ್ದೀನ್ ಜುಮ್ಮಾ ಮಸೀದಿಯ ಖತೀಬರಾದ ಸಿ.ಎಸ್.ಎಂ. ಹನೀಫ್ ಮದನಿ ಮುಖ್ಯ ಪ್ರಭಾಷಣದಲ್ಲಿ ಭಾಗವಹಿಸಿ ಸ್ವಲಾತ್ ಮತ್ತು ನಬಿ ದಿನಾಚರಣೆ ಬಗ್ಗೆ ವಿವರಣೆ ನೀಡಿದರು.

ಮಸೀದಿಯ ಮಾಜಿ ಅಧ್ಯಕ್ಷ ಎಸ್.ಎಚ್. ಮೈಯ್ಯದ್ದಿ, ಗೌರವಾಧ್ಯಕ್ಷ ಹಾಜಿ ಉಮರಬ್ಬ, ಎಸ್. ಎಚ್. ಅಬ್ದುಲ್ ಖಾದರ್, ಅಹ್ಮದ್ ಹಾಜಿ ಕೊರಡಿಹಿತ್ಲು ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಜಮಾತ್‌ನ ಹಿರಿಯ ಸದಸ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸೆ.8ರಂದು ಸಂಜೆ 5ಕ್ಕೆ ಕೆ.ಎಂ.ಝೈನುದ್ದೀನ್ ಅಧ್ಯಕ್ಷತೆಯಲ್ಲಿ ಕೊಪ್ಪ ಎನ್.ಐ ಮದ್ರಸದ ಮುಖ್ಯೋಪಾಧ್ಯಾಯರ ಫೀಕ್ ಮದನಿ ಹಾಗೂ ಅಧ್ಯಾಪಕರಾದ ಶುಐಬ್ ಝುಹುರಿ ಸುಲ್ತಾನಿ ನೇತೃತ್ವದಲ್ಲಿ ಮದರಸ ಮಕ್ಕಳಿಂದ ಮಿಲಾದ್ ಕಾರ್ಯಕ್ರಮ ಹಾಗೂ ಮಿಲಾದ್ ಕಾನ್ಫರೆನ್ಸ್ ಕಾರ್ಯಕ್ರಮ ನಡೆಯಲಿದೆ. ಭಾನುವಾರ ಬೆಳಗ್ಗೆ 9ರಿಂದ ಸಾಮೂಹಿಕ ಬೃಹತ್ ಮೌಲಿದ್, ದಿಕ್ರ್ ಮಜ್ಲಿಸ್ ಮತ್ತು ತಬರ್ರುಕ್ ವಿತರಣೆ ಮುಹಿಯುದ್ದೀನ್ ಜುಮ್ಮಾ ಮಸೀದಿ ಖತೀಬ್‌ರಾದ ಸಿ.ಎಸ್.ಎಂ. ಹನೀಫ್ ಮದನಿ ನೇತೃತ್ವದಲ್ಲಿ ಆಯೋಜಿಸಲಾಗಿದೆ ಎಂದು ನೂರುಲ್ ಇಸ್ಲಾಂ ಅಸೋಸಿಯೇಷನ್ ಹಾಗೂ ನೂರುಲ್ ಇಸ್ಲಾಂ ಯೂತ್ ಕಮಿಟಿ ತಿಳಿಸಿದೆ.

ವಿಜ್ಞಾನ್ ಇಂಡಸ್ಟ್ರೀಸ್ ಲಿಮಿಟೆಡ್
CIN : U51101KA1963PLC001510
(ಬಿಇಎಂಎಲ್ ಲಿ., ಬೆಂಗಳೂರು ಇದರ ಅಂಗ ಸಂಸ್ಥೆ)
ಹಳೆಯೂರು, ಬಿ. ಹೆಚ್. ರಸ್ತೆ, ತರೀಕೆರೆ ಅಂಚೆ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು, ಕರ್ನಾಟಕ-577228, ಭಾ